ಅಸಲು ದಾವೆ ನಂ.67/2022

ಪಿ.ಡಬ್ಲೂ: 1-ರಮಚಂದ್ರ ರೆಡ್ಡಿ ಬಿನ್ ಪಾಪಿರೆಡ್ಡಿ

ದಿನಾಂಕಃ 12/02/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 2 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಎಸ್. ವಕೀಲರಿಂದ**

1. ದಾವಾ ಸ್ವತ್ತಿನ ಸಂಖ್ಯೆಯ ಸರ್ವೆ ನಂ.141/1 ಆಗಿದ್ದು ಅದರ ವಿಸ್ತೀರ್ಣ 1 ಎಕರೆ 8 ಗುಂಟೆ ಆಗಿರುತ್ತದೆ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿಯು ದಿನಾಂಕ 12.06.1970 ರಂದು ಖರೀದಿಸಿರುತ್ತಾರೆ ಎಂದರೆ ಸರಿ. ಹಾಗಾಗೀ ಒಂದನೇ ಪ್ರತಿವಾದಿಯು ದಾವಾ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ಸರಿ. ಅದೇ ರೀತಿ ಸದರಿ ಸ್ವತ್ತಿನ ಪಹಣಿ ಪತ್ರಿಕೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ.

2. ದಾವಾ ಸ್ವತ್ತು ಮಾರಾಟಕ್ಕೆ ಇಡಲಾಗಿರುತ್ತದೆ ಎಂದು ನನಗೆ 1 ಮತ್ತು 2 ನೇ ಪ್ರತಿವಾದಿಯರು ತಿಳಿಸಿದರು. ಕ್ರಯದ ಮಾತುಕತೆ ನಡೆದಾಗ ನಾನು, 1 ಮತ್ತು 2 ನೇ ಪ್ರತಿವಾದಿಯರು, ಜಗದೀಶ್ ಮತ್ತು ಬಾಬಾಸಾಬ್ ರವರು ಹಾಜರಿದ್ದರು. ದಿನಾಂಕ 06.07.2018 ಕ್ಕಿಂತ ಒಂದು ವಾರ ಮುಂಚೆ ಮಾತುಕತೆ ನಡೆದಿತ್ತು. ಮಾತುಕತೆ ನಡೆದಾಗ ನಾನು 1 ನೇ ಪ್ರತಿವಾದಿಗೆ ಯಾವ ಅಡಚಣೆಗಾಗಿ ಸ್ವತ್ತನ್ನು ಮಾರಾಟ ಮಾಡುತ್ತಿರುತ್ತಾರೆ ಎಂದು ಕೇಳಿರುವುದಿಲ್ಲ. ಆ ಸಮಯದಲ್ಲಿ 1 ನೇ ಪ್ರತಿವಾದಿಯು ಸಂಪೂರ್ಣ ಕ್ರಯದ ಪ್ರತಿಫಲವನ್ನು ಪಡೆದುಕೊಂಡು ಕ್ರಯ ಬರೆದುಕೊಡಲು ಸಿದ್ದರಿದ್ದರು. ನಾನೂ ಸಹ ನೇರವಾಗಿ ಕ್ರಯಪತ್ರವನ್ನೇ ಮಾಡಿಕೊಳ್ಳುವ ಉದ್ದೇಶದಿಂದ ಹೋಗಿದ್ದೆ. ಮಾತುಕತೆ ನಡೆದಾಗ 1 ನೇ ಪ್ರತಿವಾದಿಯು ನನಗೆ ಅವರ ಕ್ರಯ ಪತ್ರವನ್ನು ತೋರಿಸಿದ್ದರು ಆದರೆ ಪಹಣಿಗಳನ್ನು ಪಡೆದುಕೊಳ್ಳಲು ನನಗೆ ತಿಳಿಸಿದ್ದರು. ನಂತರ ದಿನಾಂಕ 06.07.2018 ರಂದು ನಾವು ಕ್ರಯದ ಕರಾರು ಪತ್ರವನ್ನು ತಯಾರಿಸಿಕೊಂಡು ನೊಂದಣಿಗಾಗಿ ಉಪನೊಂದಣಾಧಿಕಾರಿಗಳ ಕಚೇರಿಗೆ ಹೋದಾಗ ದಾವಾ ಸ್ವತ್ತು ಜಂಟಿ ಖಾತೆಯಲ್ಲಿರುವುದರಿಂದ ಪೋಡಿ ಆಗುವವರಿಗೂ ನೊಂದಣಿ ಮಾಡಲು ಬರುವುದಿಲ್ಲ ಎಂದು ನಮಗೆ ಗೊತ್ತಾಯಿತು.

3. ದಾವಾ ಸ್ವತ್ತು ರೂ.33,60,000/-ಕ್ಕೆ ಮಾರಾಟ ಮಾಡಲು ನಿರ್ಧಾರವಾಗಿತ್ತು. ದಿನಾಂಕಎ 06.07.2018 ರಂದು ನನ್ನ ಹತ್ತಿರ ಸಂಪೂರ್ಣ ರೂ.33,60,000/-ಗಳು ಇದ್ದವು. ನನ್ನ ಹತ್ತಿರ ಹಣ ಇತ್ತು ಎಂದು ತೋರಿಸಲು ನನ್ನ ಹತ್ತಿರ ದಾಖಲೆಗಳು ಇರುವುದಿಲ್ಲ ಕಾರಣ ನಾನು ವ್ಯವಸಾಯ ಮಾಡುತ್ತಿರುತ್ತೇನೆ. ನನ್ನ ಹೆಸರಿನಲ್ಲಿ ಎಷ್ಟು ಜಮೀನುಗಳು ಇರುತ್ತವೆ ಮತ್ತು ಅದರಿಂದ ಒಟ್ಟು ಎಷ್ಟು ಆದಾಯ ಬರುತ್ತದೆ ಎಂದು ತೋರಿಸಲು ನಾನು ಈ ದಾವೆಯಲ್ಲಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಜಮೀನುಗಳು ಇರುವುದಿಲ್ಲ, ನನಗೆ

ಯಾವುದೇ ಆದಾಯ ಇರುವುದಿಲ್ಲ ಮತ್ತು ದಿನಾಂಕ 06.07.2018 ರಂದು ನನ್ನ ಹತ್ತಿರ ರೂ.33,60,000/– ಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾವು ನೇರವಾಗಿ ಕ್ರಯ ಪತ್ರವನ್ನು ಮಾಡಿಕೊಳ್ಳಲು ನೊಂದಣಿ ಕಚೇರಿಗೆ ಹೋಗಿದ್ದೆವು ಆದರೆ ಅಲ್ಲಿಗೆ ಹೋದಾಗ ಕ್ರಯ ಪತ್ರ ಮಾಡಿಕೊಳ್ಳಲು ಬರುವುದಿಲ್ಲ ಮತ್ತು ಆ ಕಾರಣಕ್ಕಾಗಿ ನಾವು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದು ನಾನು ನನ್ನ ವಾದಪತ್ರದಲ್ಲಿ ಹೇಳಿರುವುದಿಲ್ಲ ಆ ಸಮಯದಲ್ಲಿ ಸಂಪೂರ್ಣ ಕ್ರಯ ಮೊತ್ತವನ್ನು ಕೊಟ್ಟು ಕ್ರಯ ಪತ್ರವನ್ನು ಬರೆದುಕೊಳ್ಳಲು ನನಗೆ ಯಾವುದೇ ಅಡಚಣೆ ಇರಲಿಲ್ಲ. ಕ್ರಯ ಪತ್ರ ಆಗುವುದಿಲ್ಲ ಮತ್ತು ನೀವು ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳಿ ಎಂದು ನಮಗೆ ಪತ್ರ ಬರಹಗಾರರಾದ ಶ್ರೀನಿವಾಸ್ ರವರು ಸಲಹೆ ಕೊಟ್ಟಿರುತ್ತಾರೆ

4. ನಾನು ಕ್ರಯದ ಕರಾರು ಪತ್ರದ ಸಮಯದಲ್ಲಿ ಮುಂಗಡ ಹಣವಾಗಿ ರೂ.10,00,000/– ಗಳನ್ನು ಕೊಟ್ಟಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರು ತಮಗೆ ಹಣದ ಅವಶ್ಯಕತೆ ಇರುತ್ತದೆ ಎಂದು ಹೇಳಿ ರೂ.10,00,000/– ಗಳನ್ನು ಕೊಡಲು ಕೇಳಿದಾಗ ನಾನು ಕರಾರು ಪತ್ರವನ್ನು ಬರೆಯಿಸಿಕೊಂಡು ರೂ10,00,000/–ಗಳನ್ನು ಅವರಿಗೆ ಕೊಟ್ಟಿರುತ್ತೇನೆ. ಕರಾರು ಪತ್ರವನ್ನು ಮಾಡುವಾಗ 1 ರಿಂದ 6 ನೇ ಪ್ರತಿವಾದಿಯರು ಹಾಜರಿದ್ದರು. 2 ರಿಂದ 6 ನೇ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಹೊಂದಿರದೇ ಇದ್ದರೂ ಸಹ ಮುಂದೆ ಯಾವುದೇ ತೊಂದರೆ ಆಗಬಾರದು ಎಂದು ನಾನು ಅವರ ಸಹಿಗಳನ್ನೂ ಸಹ ಕರಾರು ಪತ್ರಕ್ಕೆ ಪಡೆದುಕೊಂಡಿರುತ್ತೇನೆ. ಕರಾರು ಪತ್ರವನ್ನು ಬರೆಯಿಸಿಕೊಳ್ಳುವಾಗ 2 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದು ನನಗೆ ಗೊತ್ತಿತ್ತು.

5. ಕರಾರು ಪತ್ರವಾದ ನಂತರ 1 ತಿಂಗಳ ಒಳಗಾಗಿ ಎಲ್ಲಾ ದಾಖಲೆಗಳನ್ನು ತಯಾರಿಸಿಕೊಡುತ್ತೇವೆ ಎಂದು 1 ನೇ ಪ್ರತಿವಾದಿಯು ಒಪ್ಪಿಕೊಂಡಿದ್ದರು ಮತ್ತು ಬಾಕಿ ಕ್ರಯದ ಮೊತ್ತು ಅಂದರೆ ರೂ.33,60,000/– ಗಳನ್ನು ಕ್ರಯ ಪತ್ರ ಬರೆದುಕೊಡುವಾಗ ಪಾವತಿಸುವ ಮಾತು ಆಗಿತ್ತು. ಕರಾರು ಪತ್ರವಾದ 25 ದಿನಗಳ ನಂತರ ನಾನು ದಾಖಲೆಗಳ ಬಗ್ಗೆ 1 ನೇ ಪ್ರತಿವಾದಿಗೆ ವಿಚಾರಿಸಿರುತ್ತೇನೆ ಆದರೆ ದಾಖಲೆಗಳು ಇನ್ನುವರೆಗೆ ಸಿಕ್ಕಿರುವುದಿಲ್ಲ ಎಂದು ನನಗೆ ತಿಳಿಸಿದ್ದರು. 1 ತಿಂಗಳ ನಂತರ ನನ್ನ ಹತ್ತಿರ ಬಾಕಿ ಮೊತ್ತು ತಯಾರಿರುತ್ತದೆ ಎಂದು ತಿಳಿಸಿ ಮತ್ತು ನೀವು ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದು ಕೇಳಿ ನಾನು 1 ನೇ ಪ್ರತಿವಾದಿಗೆ ಯಾವುದೇ ಲಿಖಿತ ನೋಟೀಸ್ ಕೊಟ್ಟಿರುವುದಿಲ್ಲ. 1 ತಿಂಗಳ ನಂತರ ನನ್ನ ಹತ್ತಿರ ರೂ.23,60,000/–ಗಳು ಇದ್ದವು ಎಂದು ತೋರಿಸಲು ನಾನು ಈ ದಾವೆಯಲ್ಲಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯು ಪೋಡಿಗಾಗಿ ಅರ್ಜಿ ಸಲ್ಲಿಸಿರುತ್ತಾರೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ನಾನು ಸಂಬಂಧಪಟ್ಟ ಕಚೇರಿಯಲ್ಲಿ ವಿಚಾರಣೆ ಮಾಡಿರುವುದಿಲ್ಲ. ನಾನು ದಾಖಲೆಗಳ ಬಗ್ಗೆ 1 ನೇ

ಪ್ರತಿವಾದಿಗೆ ನಿರಂತರವಾಗಿ ಕೇಳುತ್ತಾ ಬಂದಿದೆ ಆದರೆ ಅವರು ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ.

6. ನಿಪಿ-19 ರ ಪ್ರಕಾರ ದಾವಾ ಸ್ವತ್ತಿನಲ್ಲಿ 2019 ರಲ್ಲಿ ಪೋಡಿಯಾಗಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಪ್ರತ್ಯಕ ಪಹಣಿ ಆಗಿರುತ್ತದೆ ಎಂದರೆ ಸರಿಯಲ್ಲ ಆದರೆ 2022 ರಲ್ಲಿ ಆಗಿರುತ್ತದೆ. 2022 ರವರೆಗೆ ಪೋಡಿಯಾಗಿರುತ್ತದೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ನಾನು ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ ಆದರೆ ಮೌಖಿಕವಾಗಿ 1 ನೇ ಪ್ರತಿವಾದಿಗೆ ಕೇಳುತ್ತಾ ಬಂದಿದೆ. ನಾನು ನಿಪಿ-19 ನ್ನು ದಿನಾಂಕ 25.03.2022 ರಂದು ತೆಗೆದುಕೊಳ್ಳುವಷ್ಟರಲ್ಲಿ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ದಾನದ ರೂಪದಲ್ಲಿ ಕೊಟ್ಟಿದ್ದರು ಎಂದರೆ ಸರಿ. ಈಗ ನನ್ನ ಹತ್ತಿರ ರೂ.23,60,000/-ಗಳು ಇರುತ್ತವೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕರಾರು ಪತ್ರವಾದ ನಂತರ ನೇ ಪ್ರತಿವಾದಿಯು ನನ್ನ ಹತ್ತಿರ ಹಣ ಪಡೆದುಕೊಂಡು ಯಾವುದೇ ಹಿಂಬರಹವನ್ನು ಬರೆದುಕೊಟ್ಟಿರುವುದಿಲ್ಲ ಆದರೆ 3 ನೇ ಪ್ರತಿವಾದಿಯ ಮಗನಾದ ಶೇಖ್ ಜುಬೇರ್ ರವರು ಹಣ ಪಡೆದುಕೊಂಡು ಬರೆದುಕೊಟ್ಟಿರುತ್ತಾರೆ. ಸದರಿ ಶೇಖ್ ಜುಬೇರ್ ರವರು ಕರಾರು ಪತ್ರಕ್ಕೆ ಪಕ್ಷಗಾರರಲ್ಲ ಎಂದರೆ ಸರಿ.

7. ನನ್ನ ಮತ್ತು ಪ್ರತಿವಾದಿಯರ ಮಧ್ಯ ಸಂಬಂಧ ಅನ್ಯೂನ್ಯವಾಗಿರುತ್ತದೆ. 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಡುವವರೆಗೂ ನನ್ನ ಹತ್ತಿರ ಹಣ ತಯಾರಿರುತ್ತದೆ ಮತ್ತು ನನಗೆ ಕ್ರಯ ಪತ್ರ ಬರೆದುಕೊಡಿ ಎಂದು ಹೇಳಿ ನಾನು 1 ನೇ ಪ್ರತಿವಾದಿಗೆ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ ಆದರೆ ಮೌಖಿಕವಾಗಿ ಕೇಳಿರುತ್ತೇನೆ. ನಾನು ಶೇಖ್ ಜುಬೇರ್ ರವರಿಗೆ ನಾನು ದಿನಾಂಕ 05.11.2020 ರಂದು ರೂ.50,000/-ಗಳನ್ನು ಮತ್ತು ದಿನಾಂಕ 27.06.2020 ರಂದು 2 ನೇ ಪ್ರತಿವಾದಿಗೆ ರೂ.1,00,000/-ಗಳನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಿರುವ ದಿನಾಂಕದಂದು 1 ನೇ ಪ್ರತಿವಾದಿಯ ಹೆಸರಿನಲ್ಲಿ ಪ್ರತ್ಯೇಕ ಪಹಣಿ ಆಗಿತ್ತು ಎಂದರೆ ಸರಿ. ನಾನು ಸದರಿ ಯಾವುದೇ ದಿನಾಂಕಗಳಂದು ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನಾಂಕಕ್ಕಿಂತ ಮುಂಚೆ ಕ್ರಯ ಪತ್ರವನ್ನು ಬರೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದಿನಾಂಕ 27.06.2020 ರಂದು ನಾನು 2 ನೇ ಪ್ರತಿವಾದಿಗೆ ರೂ.1,00,000/-ಗಳನ್ನು ಕೊಡುವಾಗ ಬೇರೆ ಯಾರು ಹಾಜರಿರಲಿಲ್ಲ. ದಾಖಲೆಗಳನ್ನು ತಯಾರಿಸಿಕೊಳ್ಳಲು ಹಣದ ಅವಶ್ಯಕತೆ ಇರುತ್ತದೆ ಎಂದು ಹೇಳಿದ್ದಕ್ಕೆ ನಾನು 2 ನೇ ಪ್ರತಿವಾದಿಗೆ ಹಣ ಕೊಟ್ಟಿರುತ್ತೇನೆ.

8. ದಿನಾಂಕ 29.01.2019 ರಂದು ನಾನು 2 ನೇ ಪ್ರತಿವಾದಿ ಹಾಗೂ ಶೇಖ್ ಜುಬೇರ್ ರವರಿಗೆ ತಲಾ ರೂ.50,000/– ಗಳನ್ನು ಕೊಟ್ಟಿರುತ್ತೇನೆ. ಅವುಗಳನ್ನೂ ಸಹ ದಾಖಲೆಗಳನ್ನು ತಯಾರಿಸಿಕೊಳ್ಳಲು ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಬೇರೆ ಯಾರು ಹಾಜರಿರಲಿಲ್ಲ. ದಿನಾಂಕ 05.11.2020 ರಂದು ನನಗೆ 1 ನೇ ಪ್ರತಿವಾದಿಯು ಶೇಖ್ ಜುಬೇರ್ ರವರ ಮದುವೆ ಮಾಡಲು ಹಣ ಬೇಕಾಗಿರುತ್ತದೆ ಎಂದು ಕೇಳಿದ್ದಕ್ಕೆ ನಾನು ರೂ.50,000/– ಗಳನ್ನು ಶೇಖ್ ಜುಬೇರ್ ರವರಿಗೆ ಕೊಟ್ಟಿರುತ್ತೇನೆ ಮತ್ತು ಆಗ 1 ನೇ ಪ್ರತಿವಾದಿಯು ಹಾಜರಿದ್ದರು. ದಿನಾಂಕ 05.11.2020 ರಂದು ಶೇಖ್ ಜುಬೇರ್ ರವರು ಬರೆದುಕೊಟ್ಟಿರುವ ಹಿಂಬರಹಕ್ಕೆ 1 ನೇ ಪ್ರತಿವಾದಿಯು ಸಹಿ ಮಾಡಿರುವುದಿಲ್ಲ. ಅದೇ ರೀತಿ ಬೇರೆ ಹಿಂಬರಹಗಳಿಗೂ ಸಹ 1 ನೇ ಪ್ರತಿವಾದಿಯು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಯಾವತ್ತೂ ಯಾರಿಗೂ ಹಣ ಕೊಟ್ಟಿರುವುದಿಲ್ಲ ಮತ್ತು ಹಿಂಬರಹಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನಿಂದ ಹಣ ಪಡೆದುಕೊಂಡು ಹಿಂಬರಗಳನ್ನು ಬರೆದುಕೊಡಲು 2 ನೇ ಪ್ರತಿವಾದಿ ಮತ್ತು ಶೇಖ್ ಜುಬೇರ್ ರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

9. 1 ರಿಂದ 6 ನೇ ಪ್ರತಿವಾದಿಯರು ರೂ.10,00,000/–ಗಳನ್ನು ಪಡೆದುಕೊಂಡು ನನಗೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆ ಸಮಯದಲ್ಲಿ ನನ್ನ ಹತ್ತಿರ ರೂ.33,60,000/–ಗಳು ಇದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹತ್ತಿರ ಯಾವತ್ತೂ ರೂ.23,60,000/– ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . ಹಾಗಾಗಿ 7 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಹಕ್ಕು ಸ್ವಾಧೀನದಲ್ಲಿರುತ್ತವೆ ಎಂದರೆ ಸರಿ. 7 ನೇ ಪ್ರತಿವಾದಿಯ ಹೆಸರಿನಲ್ಲಿ ದಾನ ಪತ್ರ ಆದ ನಂತರ ನಾನು ಹಿಂಬರಹಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಿಂಬರಗಳಿಗೆ 1 ನೇ ಪ್ರತಿವಾದಿಯು ಸಹಿ ಮಾಡದೇ ಇರುವುದರಿಂದ ಅದು ನನಗೆ ಉಪಯೋಗಕಾರಿ ಇರುವುದಿಲ್ಲ ಎಂದರೆ ಸರಿಯಲ್ಲ.

10. ಈಗ 7 ನೇ ಪ್ರತಿವಾದಿಯೇ 1 ನೇ ಪ್ರತಿವಾದಿಯ ಆರೈಕೆ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಮತ್ತು ವಾದ ಪತ್ರದಲ್ಲಿ ಕೇಳಿರುವ ಪರಿಹಾರಗಳನ್ನು ಕೇಳಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ದಾನದ ಮೂಲಕ ದಾವಾ ಸ್ವತ್ತನ್ನು ಪಡೆದುಕೊಂಡಿದ್ದು ಅದನ್ನು ಹೇಗಾದರೂ ಮಾಡಿ ಲಪಟಾಯಿಸಿಕೊಳ್ಳಲು ನಾನು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು 1 ಮತ್ತು 3 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಪಿ.ವಿ.ಟಿ. ವಕೀಲರಿಂದ</u>**

ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆ:</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್

ಅಸಲು ದಾವೆ ನಂ.67/2022

ಪಿ.ಡಬ್ಲೂ: 2-ಜಗದೀಶ್ ಬಿನ್ ವೆಂಕಟರಾಮಪ್ಪ

ದಿನಾಂಕಃ 12/02/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 2 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಎನ್.ಎಸ್. ವಕೀಲರಿಂದ**

1. ದಾವಾ ಸ್ವತ್ತಿನ ಸಂಖ್ಯೆಯು ಸರ್ವೆ ನಂ.141/1 ಆಗಿದ್ದು ಅದರ ವಿಸ್ತೀರ್ಣ 1 ಎಕರೆ 8 ಗುಂಟೆ ಆಗಿರುತ್ತದೆ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿಯು ದಿನಾಂಕ 12.06.1970 ರಂದು ಖರೀದಿಸಿದ್ದು ಒಂದನೇ ಪ್ರತಿವಾದಿಯು ಅದಕ್ಕೆ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ಸರಿ.

2. ಕ್ರಯದ ಮಾತುಕತೆ ನಡೆದಾಗ ನಾನು ಹಾಜರಿದ್ದೆ ಮತ್ತು ಕರಾರು ಪತ್ರವಾಗುವ ಒಂದು ವಾರ ಮುಂಚೆ ಮಾತುಕತೆ ನಡೆದಿರುತ್ತದೆ. ಆಗ ನನ್ನಂತೆ ವಾದಿ, 1 ಮತ್ತು 2 ನೇ ಪ್ರತಿವಾದಿಯರು ಹಾಗೂ ಬಾಬಾಸಾಬ್ ರವರು ಹಾಜರಿದ್ದರು. ಮಾತುಕತೆ ನಡೆದಾಗ ದಾವಾ ಸ್ವತ್ತನ್ನು ರೂ.33,60,000/-ಗಳಿಗೆ ಮಾರಾಟ ಮಾಡಲು 1 ನೇ ಪ್ರತಿವಾದಿಯು ಒಪ್ಪಿಕೊಂಡರು ಮತ್ತು ಆಗ 1 ನೇ ಪ್ರತಿವಾದಿಯು ಸಂಪೂರ್ಣ ಹಣ ಪಡೆದುಕೊಂಡು ಕ್ರಯ ಪತ್ರ ಬರೆದುಕೊಡಲು ಸಿದ್ಧರಿದ್ದರು. ಆ ದಿನ 1 ನೇ ಪ್ರತಿವಾದಿಯು ತಮ್ಮ ಹೆಸರಿನಲ್ಲಿದ್ದ ಕ್ರಯ ಪತ್ರವನ್ನು ತಂದಿದ್ದರು ಮತ್ತು ಪಹಣಿಗಳನ್ನು ತಂದಿರಲಿಲ್ಲ. ಮಾತುಕತೆ ನಡೆದಾಗ ನೇರವಾಗಿ ಕ್ರಯ ಪತ್ರವನು ಮಾಡಿಕೊಳ್ಳಲು ಅವಕಾಶ ಇರುತ್ತದೆಯೋ ಇಲ್ಲವೋ ಎಂದು ಚರ್ಚೆ ಆಗಿರುವುದಿಲ್ಲ ಆದರೆ ಕ್ರಯ ಪತ್ರ ಮಾಡಿಕೊಳ್ಳಲು ನೊಂದಣಿ ಕಚೇರಿಗೆ ಹೋದಾಗ ನೊಂದಣಿ ಮಾಡಿಕೊಳ್ಳಲು ಆಗುವುದಿಲ್ಲ ಎಂದು ನಮಗೆ ಗೊತ್ತಾಗಿರುತ್ತದೆ.

3. 1 ನೇ ಪ್ರತಿವಾದಿಯು ದಾವಾ ಸ್ವತ್ತಿಗೆ ಸಂಪೂರ್ಣ ಹಕ್ಕುದಾರರಾಗಿದ್ದರು ಎಂದು ವಾದಿ ಮತ್ತು ನನಗೆ ಗೊತ್ತಿತ್ತು ಎಂದರೆ ಸರಿ. ನಾವು ನೊಂದಣಿ ಕಚೇರಿಗೆ ಹೋದಾಗ ಪೋಡಿ ಆಗುವವರೆಗೂ ಕ್ರಯ ಪತ್ರ ಮಾಡಲು ಆಗುವುದಿಲ್ಲ ಎಂದು ನಮಗೆ ಪತ್ರ ಬರಹಗಾರರಾದ ಶ್ರೀನಿವಾಸ್ ರವರು ತಿಳಿಸಿದರು. ಆ ದಿನ ವಾದಿಯು ಸಂಪೂರ್ಣ ರೂ.33,60,000/- ಗಳನ್ನು ತಂದಿದ್ದರು ಆದರೆ ಕ್ರಯ ಪತ್ರ ಆಗದೇ ಇದ್ದುದ್ದಕ್ಕಾಗಿ ಅವರು ಸಂಪೂರ್ಣ ಹಣವನ್ನು ಕೊಡಲಿಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ಹಣದ ಅವಶ್ಯಕತೆ ಇದ್ದುದ್ದಕ್ಕಾಗಿ ಮುಂಗಡ ಹಣವಾಗಿ ರೂ.10,00,000/-ಗಳನ್ನು ಕೊಡಲು ನಿರ್ಧಾರ ಮಾಡಿದೇವು.

4. ಕರಾರು ಪತ್ರವಾದ ನಂತರ 1 ತಿಂಗಳ ಒಳಗಾಗಿ ಎಲ್ಲಾ ದಾಖಲೆಗಳನ್ನು ತಯಾರಿಸಿಕೊಡುತ್ತೇವೆ ಎಂದು 1 ನೇ ಪ್ರತಿವಾದಿಯು ಒಪ್ಪಿಕೊಂಡಿದ್ದರು ಮತ್ತು ದಾಖಲೆಗಳನ್ನು ತಯಾರಿಸಿಕೊಂಡ ನಂತರ 1 ತಿಂಗಳ ಒಳಗಾಗಿ ಕ್ರಯ ಪತ್ರವನ್ನು ಬರೆದುಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದೆವು.ನಂತರ 1 ನೇ ಪ್ರತಿವಾದಿಯು ದಾಖಲೆಗಳನ್ನು ತಯಾರಿಸಿಕೊಂಡಿರುತ್ತಾರೆಯೋ

ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಒಂದು ದಿನ 2 ನೇ ಪ್ರತಿವಾದಿಯು ನನಗೆ ಪೋನ್ ಮಾಡಿ ಹಣದ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದ್ದರು. ಆಗ ನಾನು ವಾದಿಗೆ ಸದರಿ ಹಣದ ಅವಶ್ಯಕತೆಯ ವಿಚಾರವನ್ನು ತಿಳಿಸಿರುತ್ತೇನೆ ಮತ್ತು ನಂತರ 2 ನೇ ಪ್ರತಿವಾದಿಯು ವಾದಿಯಿಂದ ಹಣ ಪಡೆದುಕೊಂಡು ಹೋಗಿರುತ್ತಾರೆ ಆದರೆ ಆಗ ನಾನು ಪ್ರತ್ಯಕ್ಷವಾಗಿ ಹಾಜರಿರಲಿಲ್ಲ. ದಾಖಲೆಗಳನ್ನು ತಯಾರಿಸಿಕೊಳ್ಳಲು ರೂ.1,00,000/-ಗಳ ಅವಶ್ಯಕತೆ ಇರುತ್ತದೆ ಎಂದು ನನಗೆ 2 ನೇ ಪ್ರತಿವಾದಿ ತಿಳಿಸಿದ್ದರು. ಅವರು ಯಾವಾಗ ಪೋನ್ ಮಾಡಿದ್ದರು ಎಂದು ನನಗೆ ದಿನಾಂಕ ನೆನಪಿರುವುದಿಲ್ಲ. ಪೋನ್ ಮಾಡಿದ್ದ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ.

5. ನಂತರ 1 ನೇ ಪ್ರತಿವಾದಿ ಹಾಗೂ ಶೇಖ ಜುಬೇರ್ ರವರೂಾ ಸಹ ನನಗೆ ಎರಡೂ ಸಲ ಪೋನ್ ಮಾಡಿ ಹಣದ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದ್ದರು. ಆಗಲೂ ಸಹ ನಾನು ವಾದಿಗೆ ಸದರಿ ಹಣದ ಅವಶ್ಯಕತೆಯ ವಿಚಾರವನ್ನು ತಿಳಿಸಿರುತ್ತೇನೆ ಮತ್ತು ನಂತರ 1 ನೇ ಪ್ರತಿವಾದಿ ಹಾಗೂ ಶೇಖ್ ಜುಬೇರ್ ರವರು ವಾದಿಯಿಂದ ಹಣ ಪಡೆದುಕೊಂಡು ಹೋಗಿರುತ್ತಾರೆ ಆದರೆ ಆಗ ನಾನು ಪ್ರತ್ಯಕ್ಷವಾಗಿ ಹಾಜರಿರಲಿಲ್ಲ. ದಾಖಲೆಗಳನ್ನು ತಯಾರಿಸಿಕೊಳ್ಳಲು ರೂ.50,000/-ಗಳ ಅವಶ್ಯಕತೆ ಇರುತ್ತದೆ ಎಂದು ನನಗೆ ಎರಡು ಸಲ 1 ನೇ ಪ್ರತಿವಾದಿ ಶೇಖ್ ಜುಬೇರ್ ರವರು ತಿಳಿಸಿದ್ದರು. ಅವರು ಯಾವಾಗ ಪೋನ್ ಮಾಡಿದ್ದರು ಎಂದು ನನಗೆ ದಿನಾಂಕ ನೆನಪಿರುವುದಿಲ್ಲ. ಪೋನ್ ಮಾಡಿದ್ದ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. 1 ನೇ ಪ್ರತಿವಾದಿ ಮತ್ತು ಶೇಖ್ ಜುಬೇರ್ ರವರು ರೂ.50,000/-ಗಳನ್ನು ಎರಡು ಸಲ ಯಾಕೆ ಪಡೆದುಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ 1, 2 ನೇ ಪ್ರತಿವಾದಿಯರು ಮತ್ತು ಶೇಖ್ ಜುಬೇರ್ ರವರು ಯಾವತ್ತೂ ಪೋನ್ ಮಾಡಿರುವುದಿಲ್ಲ ಮತ್ತು ವಾದಿಯಿಂದ ಹಣ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

6. 1 ರಿಂದ 6 ನೇ ಪ್ರತಿವಾದಿಯರು ರೂ.10,00,000/-ಗಳನ್ನು ಪಡೆದುಕೊಂಡು ವಾದಿಗೆ ನನ್ನ ಸಮಕ್ಷಮ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆ ಸಮಯದಲ್ಲಿ ವಾದಿಯ ಹತ್ತಿರ ರೂ.33,60,000/-ಗಳು ಇದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಹತ್ತಿರ ಯಾವುತ್ತೂ ರೂ.23,60,000/-ಗಳು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ ಆದರೆ ಅದರ ಬಗ್ಗೆ ನಮಗೆ ನಂತರ ಗೊತ್ತಾಗಿರುತ್ತದೆ. ಹಾಗಾಗಿ 7 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಹಕ್ಕು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. 7 ನೇ ಪ್ರತಿವಾದಿಯ ಹೆಸರಿನಲ್ಲಿ ದಾನ

ಪತ್ರ ಆದ ನಂತರ ವಾದಿ ಹಿಂಬರಹಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ ಸದರಿ ಹಿಂಬರಹಗಳಿಗೆ 1 ನೇ ಪ್ರತಿವಾದಿಯು ಸಹಿ ಮಾಡದೇ ಇರುವುದರಿಂದ ಅದು ವಾದಿಗೆ ಉಪಯೋಗಕಾರಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ಮತ್ತು 3 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಪಿ.ವಿ.ಟಿ. ವಕೀಲರಿಂದ**

ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್

ಅಸಲು ದಾವೆ ನಂ.67/2022

ಪಿ.ಡಬ್ಲೂಃ 3-ಸುಬ್ರಮಣಿ ಬಿನ್ ಮುನಿಯಪ್ಪ

ದಿನಾಂಕಃ 12/02/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 2 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಎನ್.ಎಸ್. ವಕೀಲರಿಂದ**

1. ನಾನು ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇನೆ ಕ್ರಯದ ಮಾತುಕತೆ ನಡೆದಾಗ ನಾನು ಹಾಜರಿದ್ದೆ ಮತ್ತು ಕರಾರು ಪತ್ರವಾಗುವ ಒಂದು ವಾರ ಮುಂಚೆ ಮಾತುಕತೆ ನಡೆದಿರುತ್ತದೆ ಆಗ ನನ್ನಂತೆ ವಾದಿ, 1 ರಿಂದ 3 ನೇ ಪ್ರತಿವಾದಿಯರು, ಶೇಖ್ ಜುಬೇರ್ ಹಾಗೂ ಜಗದೀಶ್ ರವರು ಹಾಜರಿದ್ದರು. ಮಾತುಕತೆ ನಡೆದಾಗ ದಾವಾ ಸ್ವತ್ತನ್ನು ರೂ.33,60,000/-ಗಳಿಗೆ ಮಾರಾಟ ಮಾಡಲು 1 ನೇ ಪ್ರತಿವಾದಿಯು ಒಪ್ಪಿಕೊಂಡರು ಮತ್ತು ಆಗ 1 ನೇ ಪ್ರತಿವಾದಿಯು ಸಂಪೂರ್ಣ ಹಣ ಪಡೆದುಕೊಂಡು ಕ್ರಯ ಪತ್ರ ಬರೆದುಕೊಡಲು ಸಿದ್ಧರಿದ್ದರು. ಆ ದಿನ 1 ನೇ ಪ್ರತಿವಾದಿಯು ತಮ್ಮ ಹೆಸರಿನಲ್ಲಿದ್ದ ಕ್ರಯ ಪತ್ರವನ್ನು ತಂದಿದ್ದರು ಮತ್ತು ಪಹಣಿಗಳನ್ನು ತಂದಿರಲಿಲ್ಲ. ವಾದಿಯೂಾ ಸಹ ಸ್ವಹಃ ದಾವಾ ಸ್ವತ್ತಿನ ಪಹಣಿಗಳನ್ನು ಪಡೆದುಕೊಳ್ಳಲಿಲ್ಲ. ನಾವು ನೊಂದಣಿ ಕಚೇರಿಗೆ ಹೋದಾಗ ನೊಂದಣಿ ಮಾಡಿಕೊಳ್ಳಲು ಆಗುವುದಿಲ್ಲ ಎಂದು ನಮಗೆ ಗೊತ್ತಾಗಿರುತ್ತದೆ.

2. ದಾಖಲೆಗಳನ್ನು ತಯಾರಿಸಿಕೊಂಡ ನಂತರ 1 ತಿಂಗಳ ಒಳಗಾಗಿ ಕ್ರಯ ಪತ್ರವನ್ನು ಬರೆದುಕೊಡುತ್ತೇನೆ ಎಂದು 1 ನೇ ಪ್ರತಿವಾದಿಯು ಒಪ್ಪಿಕೊಂಡಿದ್ದರು. ನಾನು ನಿಪಿ-1 ಕರಾರು ಪತ್ರಕ್ಕೆ ಯಾವತ್ತೂ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ ಶೇಖ್ ಜುಬೇರ್ ರವರು ದಿನಾಂಕ 05.11.2020 ರಂದು ವಾದಿಯಿಂದ ರೂ.50,000/-ಗಳನ್ನು ಪಡೆದುಕೊಂಡಿರುತ್ತಾರೆ ಮತ್ತು ಆಗ ನಾನು ಹಾಜರಿದ್ದೆ. 2019 ರಲ್ಲಿಯೇ ಪೋಡಿ ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ದಾಖಲೆಗಳನ್ನು ತಯಾರಿಸಿಕೊಳ್ಳಲು ಹಣದ ಅವಶ್ಯಕತೆ ಇರುತ್ತದೆ ಎಂದು ಶೇಖ್ ಜುಬೇರ್ ರವರು ತಿಳಿಸಿದ್ದರು. ಶೇಖ್ ಜುಬೇರ್ ರವರು ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಶೇಖ್ ಜುಬೇರ್ ರವರು ಯಾವತ್ತೂ ಹಣವನ್ನು ಪಡೆದುಕೊಂಡಿರುವುದಿಲ್ಲ ಮತ್ತು ಹಡ ಪಡೆಯಲು ಅವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 2019 ರಲ್ಲಿಯೇ ಪಹಣಿ ಬದಲಾವಣೆಯಾಗಿದ್ದರಿಂದ ಶೇಖ್ ಜುಬೇರ್ ರವರು ಹಣ ಕೇಳಿದ್ದರು ಮತ್ತು ವಾದಿಯು ಹಣ ಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನಗೆ ಈಗ ಸುಮಾರು 20 ವರ್ಷಗಳಿಂದ ವಾದಿಯ ಪರಿಚಯ ಇರುತ್ತದೆ. ನಾನು ವಾದಿಯ ಮಾತು ಕೇಳಿ ಅವರಿಗೆ ಸಹಾಯ ಮಾಡಲು ವಾದಿ ಸೃಷ್ಟಿಸಿದ ಹಿಂಬರಹಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ಮತ್ತು 3 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಪಿ.ವಿ.ಟಿ. ವಕೀಲರಿಂದ**

ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್